# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಅಶೋಕ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಪುಟ್ಟೇಗೌಡ | | **13.11.2024** |
| ವಯಸ್ಸು | ಃ 36 ವರ್ಷ | | |
| ವೃತ್ತಿ | ಃ ಶಿಶು ಅಭಿವೃದ್ದಿ ಯೋಜನಾ ಅಧಿಕಾರಿಗಳು, ಬೆಂಗಳೂರು ರಾಜ್ಯ ಯೋಜನೆ, ಎನ್.ಆರ್. ಕಾಲೋನಿ, ಬೆಂಗಳೂರು | ಪ್ರಾ.ಸಾ. ಃ | 11 |
| ವಾಸಸ್ಥಳ | ಃ ಬೆಂಗಳೂರು | ಚಾ.ಸಾ. ಃ | 17 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ನಾನು ಈ ಮೊದಲು ಶ್ರೀರಂಗಪಟ್ಟಣದಲ್ಲಿ ಶಿಶು ಅಭಿವೃದ್ದಿ ಯೋಜನಾ ಅಧಿಕಾರಿಯಾಗಿ ಕೆಲಸ ಮಾಡುತ್ತಿರುವಾಗ *2023* ರ ಮೇಯಿಂದ ಜೂನ್ *14* ರವರೆಗೆ ಪಾಂಡವಪುರ ಪ್ರಭಾರ ಶಿಶು ಅಭಿವೃದ್ದಿ ಯೋಜನಾ ಅಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ಮೇಟಗಳ್ಳಿ ಪೋಲೀಸ್ ಠಾಣೆಯ ಅಧಿಕಾರಿಗಳು ಶ್ರೀಮತಿ ಮಮತಾ ಎನ್ನುವವರು ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡಿದ್ದ ಬಗ್ಗೆ ಮಾಹಿತಿ ಕೋರಿದ್ದರು ಆಗ ನಾನು ಆ ಮಮತಾ ಇವರು ದಿಃ*24.10.2009* ರಿಂದ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡಿದ ಬಗ್ಗೆ ಮತ್ತು ದಿಃ*15.05.2023* ರಿಂದ *29.05.2023* ರವರೆಗೆ ಬೇಸಿಗೆ ಇದ್ದ ರಜಾ ಇದ್ದ ಬಗ್ಗೆ ಮಾಹಿತಿ ಕೊಟ್ಟಿದ್ದೆ. ಆ ಮಮತಾ ಇವರು ಪಾಂಡವಪುರ ತಾಲೂಕಿನ ಕೆರೆತೊಣ್ಣುರು ಗ್ರಾಮದಲ್ಲಿ

ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದರು. ಈಗ ನಾನು ನೋಡುತ್ತಿರುವ ದಾಖಲೆ ನಾನು ಕೊಟ್ಟಿದ್ದ ಪತ್ರ ಮತ್ತು ದಾಖಲೆಗಳು ಇರುತ್ತವೆ, ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಗಳನ್ನು ಒಟ್ಟಿಗೆ ನಿ.ಪಿ-*18* ಮತ್ತು ಸಹಿಯನ್ನು ನಿಪಿ-*18*(ಎ) ಎಂದು ಗುರುತಿಸಿದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಎಸ್ ರವರಿಂದಃ-**

*2.* ದಿನಾಲೂ ಬೆಳಗ್ಗೆ *9.30* ರಿಂದ ಸಂಜೆ *4* ಗಂಟೆವರೆಗೆ ಅಂಗನವಾಡಿ ಕಾರ್ಯಕರ್ತರು ಅಂಗನವಾಡಿ ಕೇಂದ್ರದಲ್ಲಿ ಕೆಲಸ ಮಾಡುತ್ತಾರೆ. ಪ್ರತಿ ತಿಂಗಳು ಅಂಗನವಾಡಿ ಕಾರ್ಯಕರ್ತೆಯರು ಯಾವ ಯಾವ ದಿನಾಂಕದಂದು ಹಾಜರಾಗಿದ್ದಾರೆ ಎಂದು ನಮ್ಮ ಕಛೇರಿಗೆ ಮಾಹಿತಿ ಕೊಡುತ್ತಾರೆ ಎಂದರೆ ಆ ಮಾಹಿತಿಯನ್ನು ಸೂಪರ್ ವೈಸರ್ ಗೆ ಕೊಡುತ್ತಾರೆ. ಶ್ರೀಮತಿ ಮಮತಾ ಇವರು ಯಾವ ಯಾವ ದಿನಾಂಕದಂದು ಅಂಗನವಾಡಿ ಕೆಲಸಕ್ಕೆ ಹಾಜರಾಗಿದ್ದರು ಎನ್ನುವ ಬಗ್ಗೆ ಮಾಹಿತಿಯನ್ನು ತನಿಖಾಧಿಕಾರಿ ಕೇಳಿಲ್ಲ ಆದ್ದರಿಂದ ಕೊಟ್ಟಿಲ್ಲ. ಹಣಕಾಸಿನ ತೊಂದರೆ ಇದ್ದವರಿಗೆ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. *2023* ರಲ್ಲಿ ಮಮತಾ ಇವರಿಗೆ ಮಾಸಿಕ *11* ಸಾವಿರ ವೇತನ ಬರುತ್ತಿತ್ತು. ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು